# ಅಲೆಯುವ ಮನ, ಹಗಲುಗನಸಿನ ಗುಣ

ಈ ಸಂಚಿಕೆ 'ಪ್ರಬಂಧ ವಿಶೇಷ'ವಾಗಿದೆ. 'ಮಯೂರ' ಎಂದಿನಿಂದಲೂ ಉತ್ತಮ ಪ್ರಬಂಧಗಳಿಗೆ ಹೆಚ್ಚಿನ ಒತ್ತುಕೊಟ್ಟು ಪ್ರಕಟಿಸುತ್ತ ಬಂದಿರುವುದನ್ನು ಓದುಗರು ಗಮನಿಸಿರಬಹುದು.

ಸಾಹಿತ್ಯದ ಪ್ರಕಾರಗಳಲ್ಲಿ ಪ್ರಬಂಧಕ್ಕೆ ವಿಶಿಷ್ಟ ಚಹರೆ ಇದೆ. ಅದು ಕತೆಯಲ್ಲ, ಮಾಹಿತಿಯಲ್ಲ, ಅನುಭವಗಳ ಜೋಡಣೆಯಲ್ಲ, ಕಾದಂಬರಿಯಲ್ಲ, ಭಾವಗೀತೆಯಲ್ಲ, ತತ್ತ್ವವಲ್ಲ, ನೆನಪುಗಳ ಮೊತ್ತ ಕೂಡ ಅಲ್ಲ. ಆದರೆ, ಇವೆಲ್ಲವೂ ಹೌದು. ಈ ಎಲ್ಲದರಿಂದ ಒಂದೊಂದು ಅಂಶವನ್ನು ತೆಗೆದುಕೊಂಡು ತನ್ನದೇ ಕೌದಿಯನ್ನು ಅದು ಹೊಲಿದುಕೊಳ್ಳುತ್ತದೆ. ಓದಿದವರನ್ನು ಬೆಚ್ಚಗಿರಿಸುತ್ತದೆ, ಮುದಗೊಳಿಸುತ್ತದೆ, ಒಲಿಸಿಕೊಳ್ಳುತ್ತದೆ. ಹೀಗೇ ಎಂದು ಪ್ರಬಂಧವನ್ನು ವರ್ಣಿಸಲಾಗದು, ಗೀಜಗನ ಹಕ್ಕಿಯೊಂದು ಎಲ್ಲಿಂದಲೋ ನಾರಿನ ಎಳೆಗಳನ್ನು ತಂದು ನೇಯ್ದ ಚಿತ್ತಾಪಹಾರಿ ಗೂಡಿನ ತರಹ ಅದು. ತಂದು ಹೊಲಿದ ನಾರು ಬೇರು ಎಲ್ಲಿಯದಾದರೂ ಗೂಡು ಮಾತ್ರ ಗಿಜಗನದೇ.

ಪ್ರಬಂಧಕಾರನಿಗೆ ಸದಾ ಅಲೆಯುವ ಮನ ಮತ್ತು ಹಗಲುಗನಸು ಕಾಣುವ ಗುಣ ಬೇಕು. ಚಿಂತನೆಯ ಜೊತೆಗೆ ತುಂಟತನ, ಹಾಸ್ಯ, ಕತೆ ಹೇಳುವ ಶಕ್ತಿ, ಯಾವುದೋ ವಸ್ತುವಿಗೆ ಇನ್ಯಾವುದೋ ಘಟನೆಯನ್ನು ಜೋಡಿಸುವ, ಅದ್ಭುತ ರಮ್ಯ ಲೋಕವನ್ನು ಕಾಣಿಸಬಲ್ಲ ಗುಣಗಳೂ ಬೇಕು. ವಿಷಯವೊಂದರ ಸೆರಗು ಹಿಡಿದು ಲೋಕದರ್ಶನ ಮಾಡಿಸುವ ಅದರ ರೀತಿಯೇ ಓದುಗನಿಗೆ ಅಪೂರ್ವ ಸುಖವನ್ನು ಕೊಡುವಂಥದ್ದು. ಪ್ರಬಂಧದ ಮೂಲಭೂತ ಆಕರ್ಷಣೆ ಅದರ 'ಕಲ್ಪನಾ ವಿಲಾಸ'ದಲ್ಲಿದೆ, ಲವಲವಿಕೆಯಲ್ಲಿದೆ. ಮುಖ ಸಿಂಡರಿಸಿಕೊಂಡ ಸಿಂಡ್ರೆಲಾಗಳಿಂದ, ಸಿಡುಕಿನ ಸಿದ್ಧಪ್ಪಗಳಿಂದ ಅದು ಬಹು ದೂರ ಇರುತ್ತದೆ. ಮಿರುಗುವ, ಚೆಲುವಾದ ನಗುಮೊಗವೇ ಅದರ ಹೊರಗಿನ ಲಕ್ಷಣ ಎನ್ನಬಹುದು. ಈ ತನಕ ಪ್ರಬಂಧದ ಹೊಲದಲ್ಲಿ ನಮ್ಮ ಅನೇಕ ಹಿರಿಯ ಲೇಖಕರು ಉತ್ತಮ ಬೆಳೆಯನ್ನು ತೆಗೆದಿದ್ದಾರೆ. ಹಿಂತಿರುಗಿ ನೋಡಿದರೆ ಅವರು ಬೆಳೆದ ಉತ್ತಮ ಫಸಲು ಮತ್ತು ಅದರ ವೈವಿಧ್ಯವನ್ನು ನಾವು ಕಾಣಬಹುದು.



ಕಲೆ: ಬಸವರಾಜಾಚಾರ್ ಕೆ.ಶಿರ್

ಎತ್ತೆತ್ತಲೋ ಅಡ್ಡಾಡಿಸಿ, ನಗಿಸಿ, ಮೌನವಾಗಿಸಿ, ವಿಸ್ಮಯಗೊಳಿಸಿ, ಬದುಕಿನ ತಾತ್ತ್ವಿಕ ದರ್ಶನ ಮಾಡಿಸುವ ಪ್ರಬಂಧಗಳು ಅನೇಕ ಓದುಗರು ವಿರಾಮದಲ್ಲಿ ವಿಹರಿಸಲು ಇಷ್ಟಪಡುವ ಪ್ರಕಾರ. ಅದರ ಸಡಿಲ ಬಂಧವೇ ಅನೇಕ ಲೇಖಕರ (ಓದುಗರದೂ ಕೂಡ) ಮುಖ್ಯ ಆಕರ್ಷಣೆ. ಆದರೆ, ಏನುಬೇಕಾದರೂ ಬರೆಯಬಹುದಾದ ಸಡಿಲ ಬಂಧವಿದೆ ಎಂದು ತಮ್ಮ ನೆನಪುಗಳನ್ನು, ಮಾಹಿತಿಗಳನ್ನು ಪ್ರಬಂಧವಾಗಿಸಲು ಹೊರಟ ಅನೇಕ ಕನ್ನಡ ಲೇಖಕರು ಎಡವಿದ್ದಾರೆ. ಅದರ ಕಸೂತಿಯಲ್ಲಿ ಒಂದು ಬಂಧವಿರುತ್ತದೆ, ಬಣ್ಣದ ನೂಲುಗಳ ನಡುವೆ ಸಾವಯವ ಸಂಬಂಧವಿರುತ್ತದೆ. ಅದನ್ನು ತಿಳಿದುಕೊಳ್ಳದೆ ಬರೆಯಲು ಹೊರಟರೆ ಪ್ರಬಂಧಗಳು ಶಾಲಾ ಹುಡುಗರು ಮಾಡಿಕೊಂಡ ಪಠ್ಯದ ಟಿಪ್ಪಣಿಗಳಂತಾಗುತ್ತವೆ.

ನಾಳೆಗಳ ಬಗ್ಗೆ ನಂಬಿಕೆ ಹುಟ್ಟಿಸುವುದಕ್ಕೆ, ಕನಸು ಕಾಣುವುದಕ್ಕೆ, ಯೋಚಿಸುವುದಕ್ಕೆ ಪ್ರಬಂಧಗಳು ಬೇಕು. ಅಂತಹ ಜೀವದಾಯಿ ಪ್ರಬಂಧಗಳು ಇತ್ತೀಚೆಗೆ ಕಡಿಮೆಯಾಗುತ್ತಿವೆ. ಈ ಸಂಚಿಕೆಯಲ್ಲಿ ಬೆಳಗಲಾಗಿರುವ ಪ್ರಬಂಧಗಳ ಕಿರು ಹಣತೆಗಳು ಓದಿದವರಲ್ಲಿ ಹುರುಪು ತುಂಬಲಿ, ಆ ಪ್ರಕಾರಕ್ಕೆ ಕೊಂಚ ಉತ್ಸಾಹ, ಜೀವಂತಿಕೆಯನ್ನು ಕೊಡುವಂತಾಗಲಿ.

**ಸಂದೀಪ ನಾಯಕ**